ಎರಡು ಸಾವಿರ ವರ್ಷಗಳ ಭಾರತೀಯ ಚಿತ್ರಕಲಾಪರಂಪರೆಯಲ್ಲಿ ಸಂದರ್ಭಮುಕ್ತವಾದ ಕಲಾಕೃತಿಗಳನ್ನು ಇವರು ತೆಗೆದರು. ಕಥೆಗಳ ಜಾಲದಿಂದ ಕಲಾಕೃತಿಗಳನ್ನು ಹೊರತಂದರು. ಕಲಾಕೃತಿಗಳಿಗೆ ಬೇಕಾದ ಒಂದು ಮುಕ್ತಿಯನ್ನು ಇವರು ಒದಗಿಸಿದರು. ಟ್ಯಾಗೋರರು ತಮ್ಮ ಯಾವುದೇ ಕಲಾಕೃತಿಗಳಿಗೆ ಶೀರ್ಷಿಕೆ ಕೊಡಲಿಲ್ಲ. ಶೀರ್ಷಿಕೆಗೂ ಕಲಾಕೃತಿಗಳಿಗೂ ನೇರವಾದ ಸಂಬಂಧವಿರುವುದಿಲ್ಲ. ಶೀರ್ಷಿಕೆಯಿಂದ ಯಾವುದೇ ಕಲಾಕೃತಿ ದೊಡ್ಡದಾಗುವುದಿಲ್ಲ. ನಮ್ಮಲ್ಲಿ ಅಮೂರ್ತತೆಯ ಹೆಸರಲ್ಲಿ ಮೂರ್ತ ಕಲಾಚಿಂತನೆ ಹುಟ್ಟಿಕೊಂಡಿತು. ಅಮೂರ್ತತೆ ಕುರಿತು ಗಂಟೆಗಟ್ಟಲೆ ವ್ಯಾಖ್ಯಾನ ಕೊಡತೊಡಗಿದೆವು. ಈಗಲೂ ಇದೇ ಪರಿಸ್ಥಿತಿ ಇದೆ. ಯಾವ ಕಲಾಕೃತಿಯನ್ನು ಹೆಚ್ಚು ವ್ಯಾಖ್ಯಾನ ಮಾಡಲಾಗುತ್ತದೆಯೊ ಅದು ಒಳ್ಳೆಯ ಕಲಾಕೃತಿ ಎಂಬಂತಾಗಿದೆ. ಹಿಂದೆ ಯಾವುದನ್ನು ರಾಜರು ಮಾಡುತ್ತಿದ್ದಾರೊ ಇಂದು ಅದನ್ನು ಕಲೆಯ ದಲ್ಲಾಳಿಗಳು ಮಾಡುತ್ತಿದ್ದಾರೆ. ನನ್ನ ಆಸೆ ಏನೆಂದರೆ, ಒಬ್ಬ ಹಳ್ಳಿಯ ಹೆಣ್ಣುಮಗಳು ಕೂಡ ಒಂದು ಕಲಾಕೃತಿಯನ್ನು ನೋಡಿದಾಗ ಆಕೆಯ ಮನಸ್ಸಿನಲ್ಲಿ ಏನೋ ಒಂದು ಹೊಳೆಯಬೇಕು. ಆಕೆಗೆ ಅದನ್ನು ಬೌದ್ಧಿಕವಾಗಿ ವಿವರಿಸಲು ಸಾಧ್ಯವಾಗದೇ ಇದ್ದರೂ ಸಮಸ್ಯೆಯಿಲ್ಲ. ಈಗ ಒಂದು ಉದಾಹರಣೆ ಕೊಡಲು ಯತ್ನಿಸುವೆ. ನಾವಿಬ್ಬರೂ ಸಮುದ್ರ ತೀರದಲ್ಲಿ ನಿಂತು ಸೂರ್ಯಾಸ್ತವನ್ನು ನೋಡುತ್ತಿದ್ದೇವೆಂದುಕೊಳ್ಳೋಣ. ನಮ್ಮಿಬ್ಬರಿಗೂ ಅದು ಸುಂದರವಾಗಿ ಕಾಣುತ್ತಿದೆ. ಅಲ್ಲಿ ತೀರದಲ್ಲಿ ನೂರಾರು ಜನರಿದ್ದಾರೆ. ಮತ್ತೆ ಕೆಲವರಿಗೆ ಅಷ್ಟೇನೂ ಸುಂದರವಾಗಿ ಕಾಣುತ್ತಿಲ್ಲ. ಯಾರೋ ಒಬ್ಬ ಹೆಣ್ಣುಮಗಳು ತನ್ನ ಇಷ್ಟದವರು ತೀರಿಕೊಂಡಿದ್ದರಿಂದ ಅವರನ್ನು ಅಗ್ನಿಗೆ ಕೊಟ್ಟು ಬಂದಿದ್ದಾಳೆ. ಆಕೆಗೆ ಸೂರ್ಯಾಸ್ತ ಹೇಗೆ ಕಾಣುತ್ತಿರಬಹುದು? ಮತ್ತಿತರರು ಯಾವುದೋ ಪರಿಸ್ಥಿತಿಗಳಿಂದ ಅಲ್ಲಿಗೆ ಬಂದಿರುತ್ತಾರೆ. ಒಟ್ಟಾರೆ ಸೂರ್ಯಾಸ್ತವನ್ನು ನೋಡುವಲ್ಲಿ ಒಂದು ಡೆಮಾಕ್ರೆಟಿಕ್ ಸ್ಪೇಸ್ ಇದೆ. ಕಲೆಯ ಕುರಿತು ಇಂಥ ಡೆಮಾಕ್ರೆಟಿಕ್ ಆವರಣ ಇರಬೇಕೆಂದು ನಾನು ಹೇಳುತ್ತಿರುವೆ. ನಾವು ಅನಗತ್ಯವಾಗಿ ಒಂದು ವ್ಯಾಖ್ಯಾನವನ್ನು ಜನರ ಮೇಲೆ ಹೇರುವುದರಿಂದ ಕಲೆಯ ಸಾಧ್ಯತೆಗಳ ಕುತ್ತಿಗೆ ಹಿಚುಕುತ್ತೇವೆ. ಈ ಮಧ್ಯವರ್ತಿಗಳು ಕಲೆಗೆ ಅಪಾಯಕಾರಿ. ವಿಮರ್ಶೆ ಬೇರೆ, ವ್ಯಾಪಾರಿ ಮನೋಭಾವದ ಮಧ್ಯವರ್ತಿಗಳು ಬೇರೆ. ಕಲೆಯಲ್ಲಿ ಈ ಮಧ್ಯವರ್ತಿಗಳ ಹಾವಳಿ ಇತ್ತೀಚೆಗೆ ಹೆಚ್ಚಾಗಿದೆ. ಅವರು ಎಲ್ಲೆಲ್ಲಿಯೊ ಇದ್ದಾರೆ. ಅನಗತ್ಯವಾಗಿ ಜನಾಭಿಪ್ರಾಯವನ್ನು ತಮ್ಮ ಸ್ವಾರ್ಥಕ್ಕೆ ರೂಪಿಸುತ್ತಾರೆ. ಇದರಿಂದ ಭಾರತೀಯ ಚಿತ್ರಕಲೆಗೆ, ಕಲಾಚಿಂತನೆಗೆ ತುಂಬ ಹಾನಿಯಾಗಿದೆ. ನಾವು ಯಾವುದೇ ದೇವತೆಗಳ ಪೇಂಟಿಂಗ್ ನೋಡಿದೆವೆಂದರೆ ಕಣ್ಣುಮುಚ್ಚಿಕೊಂಡು ಕೈಜೋಡಿಸುತ್ತೇವೆ. ನಾವು ಪೇಂಟಿಂಗ್ ನೋಡುತ್ತಿರುವುದಿಲ್ಲ, ದೇವತೆಗಳನ್ನು ನೋಡುತ್ತಿರುತ್ತೇವೆ. ಈ ಮಾನಸಿಕತೆ ಇದ್ದಾಗ ಇನ್ನು ಕಲಾಚಿಂತನೆಯ ಮಾತು ಎಲ್ಲಿಯದು? ನಿಮ್ಮ ವೈಯಕ್ತಿಕ ಭಕ್ತಿ, ಧ್ಯಾನವನ್ನು ನಾನು ಅನುಮಾನಿಸುತ್ತಿಲ್ಲ. ಅದು ನಿಮ್ಮ ವೈಯಕ್ತಿಕ ಸಂಗತಿ. ಆದರೆ ಒಂದು ಕಲಾಕೃತಿಯ ಎದುರು ನಮ್ಮ ಗ್ರಹಿಕೆ ಹೇಗಿರಬೇಕು ಎಂಬ ಪ್ರಶ್ನೆಯನ್ನು ನಾನು ಕೇಳಿಕೊಳ್ಳುತ್ತಿರುವೆ. ಇತ್ತೀಚೆಗೆ ನಮ್ಮ ರಾಜಕಾರಣಿಗಳು ಕೂಡ ಚಿತ್ರಗಳೊಂದಿಗೆ ಆಡುತ್ತಿದ್ದಾರೆ. ಯಾವ್ಯಾವುದೋ ಚಿತ್ರಗಳನ್ನು ತೋರಿಸುತ್ತಾರೆ. ಜನರ ಭಾವನೆಗಳನ್ನು ಕೆರಳಿಸುತ್ತಾರೆ. ಮತಗಳಾಗಿ ಪರಿವರ್ತಿಸಿಕೊಳ್ಳುತ್ತಾರೆ. ಯಾಕೆಂದರೆ ಅವರಿಗೆ ಚಿತ್ರಗಳಿಗೂ ಜನರಿಗೂ ಇರುವ ಭಾವನಾತ್ಮಕ ಸಂಬಂಧ ಗೊತ್ತಿದೆ. ತಮ್ಮ ಚಿಂತನೆಗಳಿಂದ ಅಲ್ಲ, ತಮ್ಮ ಚಿತ್ರ-ಚಿಹ್ನೆಗಳಿಂದ ಜನರನ್ನು ಪ್ರಭಾವಿಸತೊಡಗಿದ್ದಾರೆ. ಇದೆಲ್ಲವನ್ನು ನಮ್ಮ ಜನ ಚಿತ್ರಕಲೆಯ ಸಂದರ್ಭದಲ್ಲಿ ಅರ್ಥಮಾಡಿಕೊಳ್ಳುವ ಅಗತ್ಯವಿದೆ. ಇಲ್ಲವಾದರೆ ಕಲಾಚಿಂತನೆ ಎನ್ನುವುದು ಪಾತಾಳ ತಲುಪುತ್ತದೆ.

ಕಲಾಚಿಂತನೆಯಲ್ಲಿ ಘೋಷಣೆಗಳ ತರಹದ ಮಾತುಗಳಲ್ಲಿ ನನಗೆ ನಂಬಿಕೆಯಿಲ್ಲ. ಒಂದು ಲಾಜಿಕಲ್ ಆದ ಸಂವಾದವನ್ನು ಬೆಳೆಸಬೇಕು. ಯಾಕೆಂದರೆ, ಕಲಾಚಿಂತನೆಯಲ್ಲಿ ಘೋಷಣೆಗಳು ನಮ್ಮನ್ನು ಎಲ್ಲಿಗೂ ಒಯ್ಯುವುದಿಲ್ಲ. ನಾನು ಚಿತ್ರಕಲಾ ಜಗತ್ತಿನ ಕೊನೆಯ ಸತ್ಯಗಳನ್ನೇನೂ ಹೇಳುತ್ತಿಲ್ಲ. ಅಂಥ ಧಾರ್ಷ್ಟ್ಯವನ್ನು ನಾನು ಮಾಡಲಾರೆ. ನನ್ನ ಕಾಲದ ಸತ್ಯಗಳನ್ನು ಹೇಳುತ್ತಿರುವೆ. ಕಲಾವಿದನಾಗಿ, ಕಲಾವಿಮರ್ಶಕನಾಗಿ ಇದು ನನ್ನ ಜವಾಬ್ದಾರಿ.

●